# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 671 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸುವ ದಿನಾಂಕ | 12.07.2023 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎ,ಬಿ,ಸಿ, ದರ್ಜೆಯ ದೇವಾಲಯಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಈ ಕೆಳಕಂಡ ಪ್ರವರ್ಗವಾರು ಸಂಸ್ಥೆಗಳು ಒಳಗೊಂಡಿರುತ್ತವೆ. (ಸಂಸ್ಥೆಗಳ ಜಿಲ್ಲಾವಾರು ವಿವರವನ್ನು **ಅನುಬಂಧ** ರಲ್ಲಿ ಒದಗಿಸಿದೆ)<br><br>**ಕ್ರಸಂ** \| **ಪ್ರವರ್ಗ** \| **ದೇವಾಲಯಗಳ ಸಂಖ್ಯೆ**<br>1 \| ಎ \| 205<br>2 \| ಬಿ \| 193<br>3 \| ಸಿ \| 34165<br>ಒಟ್ಟು \| \| 34563 |
| ಆ) | ಸದರಿ ದೇವಾಲಯಗಳಲ್ಲಿ ಮೂಲ ಸೌಕರ್ಯಗಳ ಕೊರತೆಗಳಾವುವು; | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಪ್ರಮುಖ ಅಧಿಸೂಚಿತ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಕಲ್ಪಿಸಲಾಗಿರುತ್ತದೆ. ದೇವಾಲಯಗಳ ಆದಾಯಕ್ಕನುಸಾರವಾಗಿ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಅಧಿಸೂಚಿತ ಸಂಸ್ಥೆಗಳಿಗೆ ಶೌಚಾಲಯ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆ, ನೀರಿನ ವ್ಯವಸ್ಥೆ, ಆಸನ ವ್ಯವಸ್ಥೆ/ ವಸತಿ ವ್ಯವಸ್ಥೆ ಇತ್ಯಾದಿಗಳನ್ನು ಅವಶ್ಯಕವಿರುವ ಕಡೆ ಒದಗಿಸಬೇಕಾಗಿರುತ್ತದೆ. |
| ಇ) | ಇವುಗಳನ್ನು ಒದಗಿಸಲು ಯೋಜನೆ ರೂಪಿಸಲಾಗಿದೆಯೇ; | ಹೌದು, ರೂಪಿಸಲಾಗಿರುತ್ತದೆ. |
| ಈ) | ಸದರಿ ಯೋಜನೆಯ ರೂಪುರೇಷೆಗಳೇನು; (ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ರಾಜ್ಯದಲ್ಲಿರುವ ಪ್ರವರ್ಗ 'ಎ' ಮತ್ತು 'ಬಿ' ಗುಂಪಿನ ದೇವಾಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಕಛೇರಿಯಿಂದ ಸುತ್ತೋಲೆ ಸಂಖ್ಯೆ: ಸಿಎನ್‌ಆರ್-1/ಸಿಆರ್/346/2010-11 ದಿನಾಂಕ:22.03.2011ರಲ್ಲಿ 31 ಅಂಶಗಳನ್ನೊಳಗೊಂಡಂತೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.<br><br>ಅದರಂತೆ ದೇವಾಲಯಗಳಲ್ಲಿ ಅಗತ್ಯವಿರುವ ಶೌಚಾಲಯ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ನೀರಿನ ವ್ಯವಸ್ಥೆ, ಹಿರಿಯರು ಕೂರಲು ಆಸನ ವ್ಯವಸ್ಥೆ, ಅವಶ್ಯಕವಿರುವ ಕಡೆ ವಸತಿ ವ್ಯವಸ್ಥೆ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಸೂಚಿಸಲಾಗಿದ್ದು, ಅದರಂತೆ ಕ್ರಮ ವಹಿಸಲು ಎಲ್ಲಾ ಜಿಲ್ಲಾಧಿಕಾರಿಗಳು/ ಉಪವಿಭಾಗಾಧಿಕಾರಿಗಳು/ ತಹಶೀಲ್ದಾರ್/ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| ಉ) | ಸದರಿ ದೇವಾಲಯಗಳಲ್ಲಿ ಬರುವ ವಾರ್ಷಿಕ ಆದಾಯವನ್ನು ಸಂಪೂರ್ಣವಾಗಿ ಅದೇ ದೇವಾಲಯದ ಅಭಿವೃದ್ಧಿಗೆ ಬಳಸಲು ನಿಯಮ ರೂಪಿಸಲಾಗಿದೆಯೇ: | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ 1997 ರ ಕಾಯ್ದೆಯ ಕಲಂ 36(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದನ್ವಯ ಆಯಾಯಾ ದೇವಾಲಯದ ಆದಾಯವನ್ನು ಆಯಾಯಾ ದೇವಾಲಯದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಬಳಸಲಾಗುತ್ತದೆ. |
| ಊ) | ಸದರಿ ದೇವಾಲಯಗಳಲ್ಲಿ ಬರುವ ವಾರ್ಷಿಕ ಆದಾಯವನ್ನು ಮುಜರಾಯಿ ಇಲಾಖೆಯ ದೇವಸ್ಥಾನಗಳ ಅಭಿವೃದ್ಧಿಗೆ ಮಾತ್ರ ಬಳಸಲಾಗುವುದೇ: ಅಥವಾ ಸರ್ಕಾರ ಬೇರೆ ಇಲಾಖೆ ಕಾರ್ಯಕ್ರಮಗಳಿಗೂ ಬಳಸಲಾಗುವುದೇ: (ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಬರುವ ವಾರ್ಷಿಕ ಆದಾಯವನ್ನು ಆಯಾಯ ದೇವಾಲಯಗಳ ಅಭಿವೃದ್ಧಿಗೆ ಮಾತ್ರವೇ ಬಳಸಲಾಗುತ್ತದೆ.<br><br>ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಸಂಗ್ರಹವಾಗುವ ವಾರ್ಷಿಕ ಆದಾಯವನ್ನು ಸರ್ಕಾರದ ಬೇರೆ ಇಲಾಖೆ ಕಾರ್ಯಕ್ರಮಗಳಿಗೆ ಬಳಸಲಾಗುವುದಿಲ್ಲ. |

ಸಂಖ್ಯೆ: ಕಂಇ 72 ಮುಸಪು 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಅನುಬಂಧ

## ರಾಜ್ಯದಲ್ಲಿರುವ ಒಟ್ಟು ಅಧಿಸೂಚಿತ ಸಂಸ್ಥೆಗಳ ವಿವರಗಳು

• ಸರ್ಕಾರದ ಅಧಿಸೂಚನೆ ಸಂಖ್ಯೆ:RD 87 MUAABI 2012 DT:29.09.2012 ರಂದು ಪ್ರಕಟಿಸಿರುವ ಅಧಿಸೂಚಿತ ಸಂಸ್ಥೆಗಳ ಪಟ್ಟಿಯ ಆಧಾರದ ಮೇರೆಗೆ)

(ಜಿಲ್ಲಾವಾರು ಅಂಕಿ ಅಂಶ)

| ಕ್ರ ಸಂ | ಜಿಲ್ಲೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿರುವ ದೇವಾಲಯಗಳ ಸಂಖ್ಯೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರ್ಪಡೆ ಮಾಡಲಾದ ಸಂಸ್ಥೆಗಳ ಸಂಖ್ಯೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತು ಪಡಿಸಲಾದ ಸಂಸ್ಥೆಗಳ ಸಂಖ್ಯೆ | ಪ್ರಸ್ತುತ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 1016 | 90 | 02 | 1104 |
| 2 | ಬೆಂಗಳೂರು ಗ್ರಾಮಾಂತರ | 1076 | 69 | 05 | 1140 |
| 3 | ಬಾಗಲಕೋಟೆ | 1167 | 0 | 01 | 1166 |
| 4 | ಬಳ್ಳಾರಿ | 1294 | 5 | 0 | 1299 |
| 5 | ಬೆಳಗಾವಿ | 3803 | 08 | 05 | 3806 |
| 6 | ವಿಜಯಪುರ | 551 | 01 | 01 | 551 |
| 7 | ಬೀದರ್ | 533 | 0 | 03 | 530 |
| 8 | ಚಾಮರಾಜನಗರ | 414 | 0 | 0 | 414 |
| 9 | ಚಿಕ್ಕಬಳ್ಳಾಪುರ | 1069 | 03 | 0 | 1072 |
| 10 | ಚಿಕ್ಕಮಗಳೂರು | 869 | 11 | 0 | 880 |
| 11 | ಚಿತ್ರದುರ್ಗ | 305 | 01 | 01 | 305 |
| 12 | ದಕ್ಷಿಣ ಕನ್ನಡ | 481 | 20 | 06 | 495 |
| 13 | ದಾವಣಗೆರೆ | 612 | 11 | 02 | 621 |
| 14 | ಧಾರವಾಡ | 938 | 02 | 10 | 930 |
| 15 | ಗದಗ | 1382 | 06 | 0 | 1388 |
| 16 | ಕಲ್ಬುರ್ಗಿ | 1629 | 03 | 02 | 1630 |
| 17 | ಹಾಸನ | 2443 | 14 | 01 | 2456 |
| 18 | ಹಾವೇರಿ | 1288 | 03 | 0 | 1291 |
| 19 | ಕೊಡಗು | 7 | 0 | 0 | 07 |
| 20 | ಕೋಲಾರ | 1320 | 08 | 0 | 1328 |
| 21 | ಕೊಪ್ಪಳ | 736 | 04 | 01 | 739 |
| 22 | ಮಂಡ್ಯ | 2008 | 113 | 01 | 2120 |
| 23 | ಮೈಸೂರು | 1313 | 02 | 04 | 1311 |
| 24 | ರಾಯಚೂರು | 1287 | 01 | 01 | 1287 |
| 25 | ರಾಮನಗರ | 865 | 02 | 0 | 867 |
| 26 | ಶಿವಮೊಗ್ಗ | 643 | 01 | 01 | 643 |
| 27 | ತುಮಕೂರು | 2462 | 0 | 01 | 2461 |
| 28 | ಉಡುಪಿ | 812 | 09 | 12 | 809 |
| 29 | ಉತ್ತರಕನ್ನಡ | 769 | 02 | 70 | 701 |
| 30 | ಯಾದಗಿರಿ | 1209 | 03 | 0 | 1212 |
| | ಒಟ್ಟು | 34301 | 392 | 130 | 34563 |

ಸಹಿ/-
ಆಯುಕ್ತರ ಪರವಾಗಿ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು-560 018